# ಕರ್ನಾಟಕ ಸ್ವಾತಂತ್ರ್ಯ ಚಳುವಳಿಯಲ್ಲಿ ರೈತ, ಸಾಮಾನ್ಯ ಜನರು ಮತ್ತು ಕಾರ್ಮಿಕ ವರ್ಗದ ಪಾತ್ರ

**ಪದ್ಮಾವತಿ ವಿ.**

ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಥಣಿ, ಬೆಳಗಾವಿ ಜಿಲ್ಲೆ.

**DOI: https://doi.org/10.5281/zenodo.17411607**

## ABSTRACT:

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ರೈತರು, ಕಾರ್ಮಿಕರು ಮತ್ತು ಸಾಮಾನ್ಯ ಜನರು ಮಹತ್ವಪೂರ್ಣ ಪಾತ್ರ ವಹಿಸಿದ್ದರು. ರಾಷ್ಟ್ರಮಟ್ಟದ ಚಳುವಳಿಗಳಿಗಿಂತ ಭಿನ್ನವಾಗಿ, ಕರ್ನಾಟಕದಲ್ಲಿ ಈ ಹೋರಾಟಗಳು ಹೆಚ್ಚು ಸ್ಥಳೀಯ ಸಮಸ್ಯೆಗಳ ಮೇಲೆ ಕೇಂದ್ರೀಕೃತವಾಗಿದ್ದು, ವಸಾಹತುಶಾಹಿ ನೀತಿಗಳ ವಿರುದ್ಧ ಹಾಗೂ ಶೋಷಕ ಭೂಮಾಲೀಕರು ಮತ್ತು ಲೇವಾದೇವಿದಾರರ ವಿರುದ್ಧ ನಡೆದ ಹೋರಾಟಗಳಾಗಿದ್ದವು. ಹೆಚ್ಚಿದ ಭೂಕಂದಾಯ, ಅಸ್ಥಿರತೆ, ಅಕ್ರಮ ಹೊರಹಾಕುವಿಕೆ ಹಾಗೂ ಶೋಷಣೆಯ ಕಾರ್ಮಿಕ ಪರಿಸ್ಥಿತಿಗಳನ್ನು ಪ್ರಶ್ನಿಸುವ ಮೂಲಕ ಇವರು ಸ್ವಾತಂತ್ರ್ಯ ಚಳುವಳಿಗೆ ಮಹತ್ವದ ಶಕ್ತಿಯನ್ನು ಒದಗಿಸಿದರು.

ಗ್ರಾಮೀಣ ಕರ್ನಾಟಕದಲ್ಲಿ ರೈತರು ಈ ಹೋರಾಟದ ನಿಜವಾದ ಬೆನ್ನೆಲುಬಾಗಿದ್ದರು. ಅವರು ಶತಮಾನಗಳ ಕಾಲ ದಬ್ಬಾಳಿಕೆ ಮತ್ತು ಅನ್ಯಾಯದೊಳಗೆ ಜೀವನವನ್ನು ನಡೆಸಿಕೊಂಡು ಬಂದು, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಡಳಿತಾತ್ಮಕವಾಗಿ ಹಿಮ್ಮೆಟ್ಟಿಸಲ್ಪಟ್ಟ ವರ್ಗದವರಾಗಿದ್ದರು. ದೇಶಕ್ಕೆ ಅನ್ನ ಕೊಡುವ ಈ ರೈತ ಸಮುದಾಯವನ್ನು 'ಅನಪೇಕ್ಷಿತ', 'ಅವಿದ್ಯಾವಂತ', 'ನಿಷ್ಪ್ರಯೋಜಕ' ಎಂಬ ತಪ್ಪು ಕಲ್ಪನೆಗಳ ಮೂಲಕ ಕಡೆಗಣಿಸಲಾಯಿತು. ಅಕ್ಷರಜ್ಞಾನದ ಕೊರತೆ ಮತ್ತು ಆಡಳಿತಾತ್ಮಕ ಪದವಿಗಳಿಂದ ದೂರವಿರುವ ಪರಿಸ್ಥಿತಿಯು ಅವರಿಗೆ ಅನ್ಯಾಯ ಹಾಗೂ ಅವಮಾನವನ್ನುಂಟುಮಾಡಿತು.

ಆದರೆ, ಈ ಶೋಷಣೆಯೇ ಅವರೊಳಗೆ ಹೊಸ ಜಾಗೃತಿಯನ್ನು ತರಲು ಕಾರಣವಾಯಿತು. ತಮ್ಮ ಹಕ್ಕುಗಳು ಮತ್ತು ಮಾನವೀಯತೆಗಾಗಿ ಹೋರಾಡಬೇಕೆಂಬ ಅರಿವು ಮೂಡಿತು. ಅನೇಕ ಪೀಳಿಗೆಗಳಿಂದ ತಲೆಬಾಗಿದ್ದ ರೈತನು ಮೊದಲ ಬಾರಿಗೆ ತಲೆಯೆತ್ತಿ ಮಾತನಾಡಲು, ಹೋರಾಡಲು ಪ್ರಾರಂಭಿಸಿದನು. ಈ ಕ್ರಿಯಾಶೀಲತೆ ಮಾತ್ರವಲ್ಲದೆ, ಶೋಷಿತ ವರ್ಗಗಳ ರಾಜಕೀಯೀಕರಣಕ್ಕೂ ಇದು ದಾರಿ ಮಾಡಿಕೊಟ್ಟಿತು. ಈ ಲೇಖನವು ಅನುಷಂಗಿಕ ಅಥವಾ ದ್ವಿತೀಯ ಮೂಲವನ್ನು ಆಧರಿಸಿದ್ದು, ಕರ್ನಾಟಕದ ರೈತರು, ಸಾಮಾನ್ಯ ವರ್ಗದ ಜನರು ಮತ್ತು ಶ್ರಮಜೀವಿಗಳ ಶೋಷಿತ ಸ್ಥಿತಿಯಿಂದ ಸಂಘಟಿತ ಹೋರಾಟದವರೆಗೆ ನಡೆದ ಪರಿವರ್ತನೆಗೆ ಹಾಗೂ ಅವರು ಭಾರತದ ಸ್ವಾತಂತ್ರ್ಯ ಚಳುವಳಿಗೆ ನೀಡಿದ ಪ್ರಮುಖ ಕೊಡುಗೆಗೆ ಬೆಳಕು ಚೆಲ್ಲುತ್ತದೆ.

## KEYWORDS:

ಕರ್ನಾಟಕದ ಸ್ವಾತಂತ್ರ್ಯ ಚಳುವಳಿ, ರೈತ, ಸಾಮಾನ್ಯ ಜನರು, ಕಾರ್ಮಿಕ ವರ್ಗ.

**ಪರಿಚಯ:**

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ರೈತರು, ಕಾರ್ಮಿಕರು ಮತ್ತು ಸಾಮಾನ್ಯ ಜನರು ಮಹತ್ವಪೂರ್ಣ ಪಾತ್ರ ವಹಿಸಿದ್ದರು. ರಾಷ್ಟ್ರಮಟ್ಟದ ಚಳುವಳಿಗಳಿಗಿಂತ ಭಿನ್ನವಾಗಿ, ಕರ್ನಾಟಕದಲ್ಲಿ ಈ ಹೋರಾಟಗಳು ಹೆಚ್ಚು ಸ್ಥಳೀಯ ಸಮಸ್ಯೆಗಳ ಮೇಲೆ ಕೇಂದ್ರೀಕೃತವಾಗಿದ್ದು, ವಸಾಹತುಶಾಹಿ ನೀತಿಗಳ ವಿರುದ್ಧ ಹಾಗೂ ಶೋಷಕ ಭೂಮಾಲೀಕರು ಮತ್ತು ಲೇವಾದೇವಿದಾರರ ವಿರುದ್ಧ ನಡೆದ ಹೋರಾಟಗಳಾಗಿದ್ದವು. ಹೆಚ್ಚಿದ ಭೂಕಂದಾಯ, ಅಸ್ಥಿರತೆ, ಅಕ್ರಮ ಹೊರಹಾಕುವಿಕೆ ಹಾಗೂ ಶೋಷಣೆಯ ಕಾರ್ಮಿಕ ಪರಿಸ್ಥಿತಿಗಳನ್ನು ಪ್ರಶ್ನಿಸುವ ಮೂಲಕ ಇವರು ಸ್ವಾತಂತ್ರ್ಯ ಚಳುವಳಿಗೆ ಮಹತ್ವದ ಶಕ್ತಿಯನ್ನು ಒದಗಿಸಿದರು.

**ರೈತರ ಪಾತ್ರ:**

ವಸಾಹತುಶಾಹಿ ಭಾರತದಲ್ಲಿ ರೈತರು ಅತ್ಯಂತ ಹೆಚ್ಚು ಬಳಲುತ್ತಿದ್ದರು. ರೈತ ಚಳುವಳಿಗಳು ವ್ಯಾಪಾರೀಕರಣವನ್ನು ಆಧರಿಸಿದ ಆಕ್ರಮಣಕಾರಿ ಬ್ರಿಟಿಷ್ ಆರ್ಥಿಕ ನೀತಿಗಳ ಪರಿಣಾಮವಾಗಿತ್ತು. ಈ ನೀತಿಯು ಕೃಷಿಯ ವಾಣಿಜ್ಯೀಕರಣಕ್ಕೆ ಕಾರಣವಾಯಿತು, ಇದು ಉತ್ಪಾದನಾ ವಿಧಾನವನ್ನು ಬದಲಾಯಿಸಿತು ಮತ್ತು ಭಾರತದಲ್ಲಿ ಸಾಂಪ್ರದಾಯಿಕ ಕೃಷಿ ಸಂಬಂಧಗಳನ್ನು ಅಡ್ಡಿಪಡಿಸಿತು. ಭೂಮಿಯನ್ನು ವ್ಯಾಪಾರದ ಘಟಕವನ್ನಾಗಿ ಮಾಡಿದ ವಿವಿಧ ಭೂ ಕಂದಾಯ ವಸಾಹತುಗಳು, ಹಾಗೆಯೇ ನಗದು ಬೆಳೆಗಳಿಗಾಗಿ ಅರಣ್ಯನಾಶವು ರೈತ ಚಳುವಳಿಗಳಿಗೆ ಕಾರಣವಾಗಿತ್ತು, ಅವು ಭೂಮಾಲೀಕರು ಮತ್ತು ಲೇವಾದೇವಿದಾರರ ವಿರುದ್ಧ ಸಾಮಾಜಿಕ ಅಶಾಂತಿ ಮತ್ತು ಬ್ರಿಟಿಷರ ವಿರುದ್ಧ ನಾಗರಿಕ ಅಶಾಂತಿ ಎರಡೂ ಆಗಿದ್ದವು. ಈ ಅಶಾಂತಿಯಲ್ಲಿ ಭಾಗವಹಿಸಿದ ಬ್ರಿಟಿಷ್ ಭಾರತದ ಬಹುತೇಕ ಇಡೀ ಜನಸಂಖ್ಯೆಯಲ್ಲಿ ರೈತರು, ಬುಡಕಟ್ಟು ಜನರು ಮತ್ತು ಸಣ್ಣ ಭೂಮಾಲೀಕರು ಇದ್ದರು. ರೈತ ಚಳುವಳಿಗಳು ಮೊದಲಿಗೆ ಬಲವಾದ ಸಂಘಟನೆಯನ್ನು ಹೊಂದಿರಲಿಲ್ಲ, ಆದರೆ ಅವು ಸ್ವಾತಂತ್ರ್ಯ ಚಳುವಳಿಯಲ್ಲಿ ಸಂಯೋಜನೆಗೊಂಡಂತೆ, ಅನೇಕ ರಾಜಕೀಯ ಪಕ್ಷಗಳು ಅವುಗಳ ಉಸ್ತುವಾರಿ ವಹಿಸಿಕೊಂಡು ಜನಪ್ರಿಯತೆಯನ್ನು ಗಳಿಸಲು ಸಹಾಯ ಮಾಡಿದವು.

**ಪ್ರಮುಖ ರೈತ ಚಳುವಳಿಗಳ ಉದ್ದೇಶಗಳು:**

ರೈತರ ಮೇಲೆ ಹೇರಲಾಗಿದ್ದ ಕಠಿಣ ಭೂ ಕಂದಾಯವನ್ನು ಮನ್ನಾ ಮಾಡುವಂತೆ ಆಗ್ರಹಿಸಲಾಯಿತು. ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ಕೊಡುವಂತೆ ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಮತ್ತು ನ್ಯಾಯವಾದ ಬೆಲೆ ನೀಡುವಂತೆ ಒತ್ತಾಯಿಸುವುದು. ಸಾಲ ಪರಿಹಾರ ಮಾಡಲು ರೈತರ ಮೇಲೆ ಸುಲಿಗೆ ಮಾಡುತ್ತಿದ್ದ ಲೇವಾದೇವಿಗಾರರು, ಜಮೀನ್ದಾರರುಗಳ ಶೋಷಣೆಯಿಂದ ಮುಕ್ತಿ ಮತ್ತು ಸಾಲ ಮನ್ನಾ ಅಥವಾ ಮರುಪಾವತಿ ವ್ಯವಸ್ಥೆ ಮಾಡುವುದು. ರೈತರ ಬಗ್ಗೆ ಅಸಭ್ಯವಾಗಿ ವರ್ತಿಸುತ್ತಿದ್ದ ಅಧಿಕಾರಶಾಹಿ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟಗಳು ನಡೆದವು. ಇವು ರೈತರ ಚಳುವಳಿಗಳ ಮುಖ್ಯ ಉದ್ದೇಶಗಳಾಗಿವೆ.

**ಪ್ರಮುಖ ರೈತ ಚಳುವಳಿಗಳ ಪ್ರಮುಖ ಘಟನೆಗಳು:**

ಭೂಮಿಯ ಹಕ್ಕು ಮತ್ತು ತೆರಿಗೆ ವಿರೋಧ ಹೋರಾಟಗಳು: ಬೆಳಗಾವಿ, ಧಾರವಾಡ, ಬಿಜಾಪುರ, ಗದಗ, ಶಿವಮೊಗ್ಗ ಮುಂತಾದ ಪ್ರದೇಶಗಳಲ್ಲಿ ರೈತರು ಸಂಯುಕ್ತವಾಗಿ ಪ್ರತಿಭಟನೆ ನಡೆಸಿದರು. ಬೆಳಗಾವಿಯ ಕೃಷ್ಣರಾಜ್ ವಾಡಿಯಾರ ಕಾಲದಲ್ಲಿ ರೈತರ ಮೇಲೆ ವಿಧಿಸಲಾದ ತೆರಿಗೆಗಳು ಮತ್ತು ಭೂ ಸುಂಕಗಳ ವಿರುದ್ಧ ಪ್ರತಿಭಟನೆಗಳು ನಡೆದವು. ಬಿಜಾಪುರ, ಧಾರವಾಡ, ಬೆಳಗಾವಿ ಮತ್ತು ಮೈಸೂರು ಪ್ರದೇಶಗಳಲ್ಲಿ ರೈತರು ಜಮೀನ್ದಾರರು

ಮತ್ತು ಬ್ರಿಟಿಷರ ವಿರುದ್ಧವಾಗಿ ಹೋರಾಡಿದರು. ಕಿತ್ತೂರು ರಾಣಿ ಚೆನ್ನಮ್ಮ 1824 ಬ್ರಿಟಿಷರ "ದತ್ತು ಮಕ್ಕಳಿಗೆ ಹಕ್ಕಿಲ್ಲ" ನೀತಿಯ ವಿರುದ್ಧ ಹೋರಾಡಿ ಪ್ರಥಮ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ಎಂದು ಖ್ಯಾತರಾದರು. ಸಂಗೊಳ್ಳಿ ರಾಯಣ್ಣನ ಬಳಿ 1,000 ಯೋಧರಿದ್ದು ಗೆರಿಲ್ಲಾ ಮಾದರಿಯ ಯುದ್ಧದ ಕಲೆಯನ್ನು ಬಲ್ಲವರಾಗಿದ್ದರು. ರೈತರ ಹಾಗೂ ಸೈನಿಕರ ಬೆಂಬಲದೊಂದಿಗೆ ಬ್ರಿಟಿಷರ ವಿರುದ್ಧ ಗೆರಿಲ್ಲಾ ಮಾದರಿ ಯುದ್ಧ ನಡೆಸಿ ರೈತರ ಹೋರಾಟದ ಸ್ಫೂರ್ತಿದಾಯಕ ದೇಶಭಕ್ತಿಯ ಉತ್ಸಾಹ ತುಂಬಿದರು.

ಮೈಸೂರು ಪ್ರಾಂತ್ಯಕ್ಕೆ ಸೇರಿದ ಶಿವಮೊಗ್ಗ ಜಿಲ್ಲೆಯ ಬಿದನೂರು ಎಂಬಲ್ಲಿ ನಗರ ದಂಗೆ ಅಥವಾ ಬಿದನೂರು ದಂಗೆ 1830 ರಲ್ಲಿ ಪ್ರಮುಖ ಪಾತ್ರವನ್ನು ಬೂದಿ ಬಸಪ್ಪ ಅಥವಾ ಸದರಮಲ್ಲ ಎಂಬ ಒಬ್ಬ ಸಾಮಾನ್ಯ ರೈತನ ಮಗ ಮೈಸೂರು ಸಂಸ್ಥಾನಕ್ಕೆ ನೀಡಬೇಕಾದ ಕಂದಾಯ ವಿರುದ್ಧ ದಂಗೆ ಏಳುತ್ತಾನೆ. ಕಂದಾಯವನ್ನು ವಜಾ ಮಾಡಿಸುವುದಾಗಿ ರೈತರನ್ನು ಒಟ್ಟುಗೂಡಿಸಿ ಬ್ರಿಟಿಷರ ವಸಾಹತುಗಳ ಮೇಲೆ ದಾಳಿ ಮಾಡಿ ಶಸ್ತ್ರಾಸ್ತ್ರಗಳನ್ನು ಲೂಟಿ ಮಾಡುತ್ತಿದ್ದರು. ಇದನ್ನರಿತ ಬ್ರಿಟಿಷರ ಪರವಾಗಿ ಕೆಲಸ ಮಾಡುತ್ತಿದ್ದ ಕೃಷ್ಣರಾಯ ಎಂಬಾತನು ಹೊಳೆಹೊನ್ನೂರಿನಲ್ಲಿ ರೈತ ಶಿಬಿರದ ಮೇಲೆ ದಾಳಿ ಮಾಡಿ 500 ರೈತರನ್ನು ಕೊಲ್ಲಿಸುತ್ತಾನೆ, ಸಾವಿರಾರು ರೈತರು ಗಾಯಾಳುಗಳಾಗುತ್ತಾರೆ ಹಾಗೂ ಬೂದಿಬಸಪ್ಪನನ್ನು ಹಿಡಿದು ಗಲ್ಲಿಗೇರಿಸಲಾಯಿತು.

ಬಾದಾಮಿ ದಂಗೆ 1841 ರಲ್ಲಿ ನರಸಿಂಗ ದತ್ತಾತ್ರೇಯ ಪಾಟ್ಕೆರ್ ದಂಗೆ ಎದ್ದನು. ಸುಮಾರು 1,000 ಜನ ರೈತ ಯೋಧರ ಪಡೆಯನ್ನು ಹೊಂದಿದ್ದನು, ಈತನನ್ನು ಬ್ರಿಟಿಷರು ಜೀವಾವಧಿ ಶಿಕ್ಷೆಗೆ ಗುರಿಪಡಿಸಿದರು. ಕೊಡಗು ದಂಗೆ:

183537 ರಲ್ಲಿ ನಡೆದ ಚಳುವಳಿಯಲ್ಲಿ ಅಪರಾಂಪರಸ್ವಾಮಿ, ಪುಟ್ಟ ಬಸಪ್ಪ, ಕಲ್ಯಾಣಸ್ವಾಮಿ ಮುಂತಾದವರು ಕೊಡಗಿನಲ್ಲಿ ರೈತರ ವಿರುದ್ಧ ಬಂಡಾಯವನ್ನು ನಡೆಸಿ ಗಲ್ಲಿಗೇರಿಸಿರುವುದನ್ನು ಕಾಣಬಹುದಾಗಿದೆ.

**ಬೆಳಗುತ್ತಿ ಬಂಡಾಯ:** 1935 ರಲ್ಲಿ ತಿಮ್ಮಪ್ಪನಾಯಕ ಮತ್ತು ಮರಿಯಪ್ಪ ನಾಯಕ ಮತ್ತು ದಿಗಂಬರಪ್ಪ ಎಂಬುವರ ನೇತೃತ್ವದಲ್ಲಿ ದಂಗೆ ಪ್ರಾರಂಭವಾಗಿ ಇದರಲ್ಲಿ ರೈತರು ಭಾಗವಹಿಸಿರುವುದನ್ನು ಕಾಣಬಹುದಾಗಿದೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ

192030 ಭೂಸ್ವಾಮ್ಯ ಶೋಷಣೆ ಮತ್ತು ತೆರಿಗೆ ಹೆಚ್ಚಳಕ್ಕೆ ವಿರುದ್ಧ ರೈತರು ಚಳುವಳಿಯನ್ನು ನಡೆಸಿ ಹೋರಾಟ ಮಾಡಿದರು. ನಂಜನಗೂಡು ರೈತ ಚಳುವಳಿ:193040ರಲ್ಲಿ ರೈತರ ಹಕ್ಕುಗಳು ಮತ್ತು ಭೂಮಿಯ ನ್ಯಾಯಕ್ಕಾಗಿ ಪ್ರತಿಭಟನೆಯನ್ನು ನಡೆಸಿದರು. ಶಿವಮೊಗ್ಗ ರೈತ ಹೋರಾಟ: 1930–40, ಜಮೀನ್ದಾರರ ಶೋಷಣೆ ವಿರೋಧಿಸಿ ನಡೆದ ಹೋರಾಟವನ್ನು ಮಾಡಲಾಯಿತು. ಅಗರ್‌ಹಳ್ಳಿ ರೈತ ಪ್ರತಿಭಟನೆ:1930 ಗ್ರಾಮೀಣ ಶೋಷಣೆ ವಿರುದ್ಧ ರೈತರ ಪ್ರತಿನಿಧಿತ್ವದ ಚಳುವಳಿಯಾಗಿರುತ್ತದೆ.

ಸ್ವಾತಂತ್ರ್ಯ ಪಡೆದ ನಂತರವೂ ಕೂಡ ರೈತ ಚಳುವಳಿಗಳು ಆರಂಭವಾದವು. ಅವುಗಳಲ್ಲಿ ಪ್ರಮುಖ ಘಟನೆಗಳು ಈ ಮುಂದಿನಂತಿರುತ್ತವೆ.

**ಕಾಗೋಡು ಸತ್ಯಾಗ್ರಹ 1951:** ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಕಾಗೋಡು ಗ್ರಾಮದಲ್ಲಿ ೧೯೫೧ ರಲ್ಲಿ ನಡೆದ ಗೇಣಿ ರೈತರ ಸತ್ಯಾಗ್ರಹ. ಈ ರೈತ ಹೋರಾಟ ಕರ್ನಾಟಕದ ರೈತ ಚಳುವಳಿಯ ಇತಿಹಾಸದಲ್ಲಿ ಮೈಲಿಗಲ್ಲಾಗಿದೆ.ದೇಶಕ್ಕೆ ಸ್ವಾತಂತ್ರ್ಯ ಬಂದಾಗ ರಾಜಕೀಯ ಅಧಿಕಾರ ಜನರಿಗೆ ಪ್ರಾಪ್ತವಾಗಿದ್ದರೂ ಆರ್ಥಿಕ ಶೋಷಣೆಯಿಂದ ಜನರು ಮುಕ್ತವಾಗಿರಲಿಲ್ಲ.

ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನ್ದಾರಿಕೆ ವ್ಯವಸ್ಥೆಯ ಮೂಲದಿಂದ ಬಂದ ಗೇಣಿ ಪದ್ಧತಿಯೂ ಅಂತಹ ಶೋಷಣೆಗೆ ಹೆಚ್ಚಿನ ಅವಕಾಶ ನೀಡಿತ್ತು. ಆಗ ಇಂಥ ವ್ಯವಸ್ಥೆಯ ವಿರುದ್ಧ ಈ ರೈತ ಹೋರಾಟ ನಡೆಯಿತು. ಸಾಗರ ಪಟ್ಟಣದಿಂದ ಉತ್ತರದಿಕ್ಕಿಗೆ ಕೆಳದಿಮಾಸೂರು ಮಾರ್ಗದಲ್ಲಿ ಸಾಗರದಿಂದ 15ಕಿಮೀ ದೂರದಲ್ಲಿ ವರದಾ ನದಿಯ ದಂಡೆಯ ಮೇಲಿರುವ ಕಾಗೋಡು ಮಲೆನಾಡಿನ ಒಂದು ಪುಟ್ಟ ಹಳ್ಳಿ. ಕಾಗೋಡು ಚಳವಳಿ ನಡೆದ ಕಾಲಕ್ಕೆ ಇಲ್ಲಿ ಒಟ್ಟು 50 ಮನೆಗಳಿದ್ದುವು. ಈಗ 232 ಕುಟುಂಬಗಳಿವೆ. ಅವುಗಳಲ್ಲಿ ದೀವರ ಕುಟುಂಬಗಳೆ ಹೆಚ್ಚು. ಉಳಿದಂತೆ ಹರಿಜನರು, ಮಡಿವಾಳರು, ಅಕ್ಕಸಾಲಿಗರು, ಲಿಂಗಾಯಿತರು ಮೊದಲಾದವರಿದ್ದರು. ಒಟ್ಟು ಜಮೀನಿನ ವಿಸ್ತೀರ್ಣ ಸು.891 ಎಕರೆ. ಆಗಿನ ಮೈಸೂರು ರಾಜ್ಯದ ಮಲೆನಾಡು ಪ್ರಾಂತ್ಯದಲ್ಲಿ ಭೂ ಒಡೆತನದ ಹಕ್ಕು ಹಿಂದು ಶ್ರೇಣೀಕೃತ ಸಮಾಜದ ಮೇಲ್ವರ್ಗದವರ ಕೈಯಲ್ಲಿ ಹೆಚ್ಚಾಗಿತ್ತು. ಕೆಲವೇ ಜಮೀನ್ದಾರರ ಅಡಿಯಲ್ಲಿ ರೈತಾಪಿ ಗೇಣಿ ಒಕ್ಕಲುಗಳು ಇರುತ್ತಿದ್ದರು. ಅವರೆಲ್ಲ ಬಹುತೇಕ ಗೇಣಿದಾರರಾಗಿ ಮತ್ತು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಪ್ರತಿಯೊಬ್ಬ ಗೇಣಿದಾರನೂ ಭೂ ಮಾಲೀಕರ ಬಳಿ ವರ್ಷದಲ್ಲಿ 1520 ದಿವಸ ಸಂಬಳವಿಲ್ಲದೆ ಬಿಟ್ಟಿ ಕೆಲಸ ಮಾಡಬೇಕಾಗಿತ್ತು. ಮಲೆನಾಡಿನಲ್ಲಿ ಬತ್ತ ಮತ್ತು ಇತರ ಧಾನ್ಯಗಳನ್ನು ಅಳೆಯುವ ಸಾಧನವಾಗಿ ಕೊಳಗ ಎಂಬ ಮಾನಕವಿತ್ತು. ರೈತ ಸಂಘಟನೆಯು ಸ್ವಾತಂತ್ರ್ಯ ಬರುವ ಸ್ವಲ್ಪ ಮೊದಲೇ ಒಂದು ನೆಲೆಯನ್ನು ಕಂಡುಕೊಂಡಿತ್ತು. ಕಾಂಗ್ರೆಸ್‌ನ ಪ್ರಮುಖರು ಮತ್ತು ಮುಂದೆ ಸಚಿವರಾಗಿ ಕೀರ್ತಿಪಡೆದ ಕಡಿದಾಳ್ ಮಂಜಪ್ಪ ನವರು 1945ರಲ್ಲಿಯೇ ತೀರ್ಥಹಳ್ಳಿಯಲ್ಲಿ ಮಲೆನಾಡು ಗೇಣಿ ರೈತ ಸಂಘವನ್ನು ಸ್ಥಾಪಿಸಿದ್ದರು.

ಸ್ವಾತಂತ್ರ್ಯ ಹೋರಾಟಗಾರ ಎಚ್. ಗಣಪತಿಯಪ್ಪ, ಮರತ್ತೂರಿನ ಡಿ. ಮೂಕಪ್ಪ, ಮನೆಘಟ್ಟ ಚೌಡಪ್ಪ, ಎಲಗಳಲೆ ಡಿ.ಆರ್.ಹುಚ್ಚಪ್ಪ, ಬರಸಿನ ದ್ಯಾವಪ್ಪ, ಕಾಗೋಡಿನ ಪವಾಜಿ ಬೀರನಾಯ್ಕ, ಮಂಡಗಳಲೆ ಹೊಸೂರು ರಾಮನಾಯ್ಕ ಮೊದಲಾದ ಮುಖಂಡರು ಈ ಸಂಘಟನೆಯಲ್ಲಿ ಪಾಲ್ಗೊಂಡಿದ್ದರು. ಗೇಣಿದಾರರ ಸಮುದಾಯದ ಬಹುಭಾಗವಾಗಿದ್ದ ದೀವರ ಜನಾಂಗದ ಹಿರಿಯರು ಈ ಸಂಸ್ಥೆಯ ಮುಂಚೂಣಿಯಲ್ಲಿದ್ದರು. ತಮ್ಮ ಹಕ್ಕು ಬಾಧ್ಯತೆಗಳ ಬಗ್ಗೆ ಗೇಣಿದಾರರಲ್ಲಿ ಅವರು ಜಾಗೃತಿ ಮೂಡಿಸತೊಡಗಿದರು. ಆಗಿನ ಕಾಲಕ್ಕೆ ವಿದ್ಯಾವಂತರಾಗಿದ್ದ ಎಚ್. ಗಣಪತಿಯಪ್ಪನವರು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರದ ಸಮೀಪದ ಹೊಸೂರಿನವರು. ರೈತಕುಟುಂಬದಲ್ಲಿ ಹುಟ್ಟಿದ ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಗಾಂಧೀವಾದಿಗಳಾಗಿದ್ದರು. ಕಾಗೋಡು ಹಿರೇನೆಲ್ಲೂರು ಗ್ರಾಮಕ್ಕೆ ಸೇರಿದ ಮುಜ್ರೆ ಗ್ರಾಮ. ಇಲ್ಲಿಯ ಭೂಮಾಲೀಕರಾದ ಕೆ.ಜಿ.ಒಡೆಯರ್ ಕುಟುಂಬದವರು ಶಿವಮೊಗ್ಗ ಜಿಲ್ಲೆಯ ಭೂಮಾಲೀಕರಲ್ಲಿ ಪ್ರಮುಖರಾಗಿದ್ದರು. ಈ ಕಾಗೋಡು ಗೌಡರ ಮನೆಗೆ ಏಳುಹಳ್ಳಿ ಗೌಡಿಕೆ ಇತ್ತು. ಕೆ.ಗುರುಬಸಪ್ಪಗೌಡ ಅಥವಾ ಕೆ.ಜಿ.ಒಡೆಯರ್ ನಡುಕಲ ಸಹೋದರರಾಗಿದ್ದು ಉನ್ನತ ವ್ಯಾಸಂಗ ಮಾಡಿದ್ದರು. ವಿದೇಶ ಪ್ರವಾಸ ಮಾಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದರು. ಈ ನಡುವೆ 1951 ಏಪ್ರಿಲ್ 16ರಂದು ಕಡಗಳಲೆ ಎಂಬ ಗ್ರಾಮದಲ್ಲಿ ಭೂಮಾಲೀಕರು ಮತ್ತು ರೈತರ ನಡುವೆ ಜಮೀನು ಉಳುತ್ತಿದ್ದಾಗ ಘರ್ಷಣೆ ನಡೆದು ರೈತರು ಆರಂಭ ಮಾಡುತ್ತಿದ್ದಾಗ ಅವರ ಮೇಲೆ ಹಲ್ಲೆಗಳು ನಡೆದವು.

ಏಪ್ರಿಲ್ 18ರಂದು ರೈತ ಸಂಘದ ಅಧ್ಯಕ್ಷರಾದ ಡಿ.ಮೂಕಪ್ಪನವರ (ಮಾಜಿ ಶಾಸಕರು) ಮುಖಂಡತ್ವದಲ್ಲಿ ಪ್ರಥಮ ಸತ್ಯಾಗ್ರಹ ತಂಡ ಧರಣಿ ಕುಳಿತು ಬಂಧನಕ್ಕೊಳಗಾಯಿತು.

ಸರಕಾರ ನೂರಾರು ಪೊಲೀಸರನ್ನು ಒಡೆಯರ ಜಮೀನಿಗೆ ಪಹರೆ ಹಾಕಿತು. ರೈತರು ಅಲ್ಲಲ್ಲಿ ಚಳವಳಿ ನಡೆಸಿ ಲಾಠಿ ಏಟು ತಿಂದರೂ ಹೆದರದೆ ಬಂಧನಕ್ಕೊಳಗಾಗುತ್ತಿದ್ದರು. ಆಗ ಕಂದಾಯ ಸಚಿವರಾಗಿದ್ದ ಕಡಿದಾಳ್ ಮಂಜಪ್ಪನವರು ಕಾಗೋಡು ಭೂಮಾಲೀಕರಿಗೂ ರೈತರಿಗೂ ನಡುವೆ ಸಂಧಾನಸಭೆ ನಡೆಸಿದರು. ಅನೇಕ ರೈತ ಮುಂದಾಳುಗಳು ಬಂಧಿತರಾದರು. 1951 ಮೇ 21ರಂದು ಎಚ್.ಗಣಪತಿಯಪ್ಪನವರು ಕಾಗೋಡಿನಲ್ಲಿ ರೈತ ಸಂಘದ ಸಭೆ ಏರ್ಪಡಿಸಿದರು. ಆಗ ಆ ಸಭೆಯಲ್ಲಿ ಸಮಾಜವಾದಿ ಪಕ್ಷದ ಮುಖಂಡರಾಗಿದ್ದ ತೀರ್ಥಹಳ್ಳಿ ತಾಲ್ಲೂಕಿನ ಶಾಂತವೇರಿ ಗೋಪಾಲಗೌಡರು ಭಾಗವಹಿಸಿದ್ದರು. 1948ರಲ್ಲಿ ಸಂಘಟಿಸಿದ ರೈತ ಸಮಾವೇಶಕ್ಕೆ ರಾಮಾನಂದ ಮಿಶ್ರ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಬಂದು ಭಾಗವಹಿಸಿದ್ದರು. ಹೀಗೆ ರೈತರೊಡನೆ ಸಂಪರ್ಕ ಮತ್ತು ರಾಜಕೀಯ ಪ್ರಬುದ್ಧತೆ ಪಡೆದಿದ್ದ ಗೋಪಾಲಗೌಡರ ನಾಯಕತ್ವ ಕಾಗೋಡು ಸತ್ಯಾಗ್ರಹಕ್ಕೆ ದೊರೆತದ್ದು ಅದರ ಶಕ್ತಿ ನೂರ್ಮಡಿಯಾಗಲು ಕಾರಣವಾಯಿತು ಈ ಚಳುವಳಿಯಲ್ಲಿ ಸಮಾಜವಾದಿ ಕಾರ್ಯಕರ್ತರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು ರೈತರೊಂದಿಗೆ ಭಾಗವಹಿಸಿದರು. ಗೋಪಾಲಗೌಡರು, ವೈ.ಆರ್.ಪರಮೇಶ್ವರಪ್ಪ, ಜಿ.ಸದಾಶಿವರಾವ್, ಗರುಡಶರ್ಮ, ಖಾದ್ರಿಶಾಮಣ್ಣ, ಟಿ.ಎನ್.ಗಂಡುಗಲಿ, ಬೀ.ಸು.ಕೃಷ್ಣಮೂರ್ತಿ, ಸಿ.ಜಿ.ಕೆ. ರೆಡ್ಡಿ, ಮುಲ್ಕಾಗೋವಿಂದ ರೆಡ್ಡಿ, ಈಶ್ವರಪ್ಪ ಮೊದಲಾದವರು ಶಾಂತವೇರಿ ಗೋಪಾಲಗೌಡರು ರಾಷ್ಟ್ರಮಟ್ಟದ ಸಮಾಜವಾದಿ ನಾಯಕರಾದ ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ್, ಪಂಡಿತ ರಮಾನಂದ ಮಿಶ್ರರಂತಹವರ ಗಮನವನ್ನು ಈ ಚಳುವಳಿಯತ್ತ ಸೆಳೆದರು. ಲೋಹಿಯಾರವರು ಕಾಗೋಡಿನಲ್ಲಿ ರೈತ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ್ದಲ್ಲದೆ ಸ್ವತಃ ಒಡೆಯರ ಜಮೀನನ್ನು ಸುತ್ತುವರಿದಿದ್ದ ಬೇಲಿಯನ್ನು ಕಿತ್ತೆಸೆದು ಮುನ್ನುಗ್ಗಿದ್ದರು. ಆಗ ರೈತ ಸಮೂಹ ಪ್ರವಾಹದೋಪಾದಿಯಲ್ಲಿ ನುಗ್ಗಿಬಂದು ಎಲ್ಲ ಬಂಧನಗಳನ್ನು ಕಿತ್ತೆಸದು ಉಳುವವನೆ ನೆಲದೊಡೆಯ, ಇಂಕ್ವಿಲಾಬ್ ಜಿಂದಾಬಾದ್ ಎಂಬ ಘೋಷಣೆಗಳನ್ನು ಮೊಳಗಿಸುತ್ತ ರೈತ ಚಳುವಳಿಗೆ ಹೊಸ ಇತಿಹಾಸ ಬರೆಯಿತು. ಅಂದು ರಾತ್ರಿ ಸಾಗರ ರೈಲ್ವೆ ನಿಲ್ದಾಣದಲ್ಲಿ ಲೋಹಿಯಾ ಅವರನ್ನು ಬಂಧಿಸಲಾಯಿತು. ಅವರು ನ್ಯಾಯಾಲಯದ ಕಟಕಟೆಯಲ್ಲಿ ನಿಂತು ರೈತರ ಹೋರಾಟದ ನ್ಯಾಯಸಮ್ಮತ ಬೇಡಿಕೆಯನ್ನು ಪ್ರತಿಪಾದಿಸಿದರು. ಈ ಸುದ್ದಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಯಿತು. ಆಗ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂರವರು ಕೂಡಲೇ ಲೋಹಿಯಾ ಅವರ ಮೇಲೆ ಹೂಡಿದ್ದ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದರು.

ರೈತ ಚಳುವಳಿ ಹಾಗೂ ಕಾಗೋಡು ಸತ್ಯಾಗ್ರಹ ಚಳುವಳಿ ನಿಂತಿತು. 1974ರಲ್ಲಿ ಡಿ. ದೇವರಾಜ ಅರಸು ಅವರ ಸರ್ಕಾರ ತಂದ ಸಮಗ್ರ ಗೇಣಿ ಶಾಸನ ಸಂಪೂರ್ಣವಾಗಿ ಸಮಗ್ರ ಗೇಣಿ ಜಮೀನಿಗೆ ಗೇಣಿದಾರರನ್ನು ಒಡೆಯರನ್ನಾಗಿ ಮಾಡುವಲ್ಲಿ ದೊಡ್ಡ ಹೆಜ್ಜೆಯಾಯಿತು. ಅಲ್ಲಿಗೆ ಕಾಗೋಡು ಸತ್ಯಾಗ್ರಹ ಯಾವ ಧ್ಯೇಯೋದ್ದೇಶಗಳಿಗಾಗಿ ಹುಟ್ಟಿಕೊಂಡಿತೋ ಅದು ಪೂರ್ಣಗೊಂಡಂತಾಯಿತು.

**ಮಲಪ್ರಭಾ ರೈತ ಚಳುವಳಿ:** 1970 ರಲ್ಲಿ ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ನಡೆದ ಈ ಚಳುವಳಿಯು ರೈತರ ಅಸಮಾಧಾನಕ್ಕೆ, ನೀರಿಲ್ಲದೆ ನೀರಾವರಿ ಕರ ವಸೂಲಿ, ಹತ್ತಿ ಬೆಲೆ ಕುಸಿತ, ಮತ್ತು ಅಧಿಕಾರಶಾಹಿಯ ದರ್ಪ ಮುಂತಾದ ಕಾರಣಗಳಾಗಿವೆ. ಕರ್ನಾಟಕ ರಾಜ್ಯ ರೈತ ಸಂಘ 1980ರಲ್ಲಿ ಮಲಪ್ರಭಾ ಚಳುವಳಿಯ ಫಲಿತಾಂಶವಾಗಿ ರೂಪುಗೊಂಡ ಈ

ಸಂಘವು ನಂತರದ ದಿನಗಳಲ್ಲಿ ರೈತರ ಹಕ್ಕುಗಳಿಗಾಗಿ ವಿವಿಧ ಚಳುವಳಿಗಳನ್ನು ನಡೆಸಿದೆ. ಐತಿಹಾಸಿಕ ನಗುವ ಚಳುವಳಿ 1991 ಕರ್ನಾಟಕ ರಾಜ್ಯ ರೈತ ಸಂಘವು ಅಂದಿನ ಕಾಂಗ್ರೆಸ್ ಸರ್ಕಾರದ ವಿರುದ್ಧ ವಿಧಾನಸೌಧದ ಮುಂದೆ ನಡೆಸಿದ ಒಂದು ಪ್ರತಿಭಟನೆಯಾಗಿದೆ. ಈ ಚಳುವಳಿಗಳ ಪರಿಣಾಮಗಳು ಭೂಸುಧಾರಣಾ ನೀತಿಗಳನ್ನು ಜಾರಿಗೆ ತರಲು ಸರ್ಕಾರಗಳನ್ನು ಪ್ರೇರೇಪಿಸಿತು, ಜಮೀನ್ದಾರಿ ಪದ್ಧತಿಯನ್ನು ರದ್ದುಪಡಿಸಿತು. ರೈತರ ಕಲ್ಯಾಣಕ್ಕಾಗಿ ಸಹಕಾರಿ ಸಾಲ ಸಂಘಗಳು ಮತ್ತು ಬ್ಯಾಂಕುಗಳು ಆರಂಭಿಸಲು ದಾರಿ ಮಾಡಿಕೊಟ್ಟಿತು. ರೈತಾಪಿ ವರ್ಗದ ರಾಜಕೀಯ ಪ್ರಾತಿನಿಧ್ಯ ಹೆಚ್ಚಿಸಲು ಕಾರಣವಾಯಿತು, ರೈತಪರ ರಾಜಕೀಯ ಪಕ್ಷಗಳ ಸ್ಥಾಪನೆಗೆ ಉತ್ತೇಜನ ನೀಡಿತು. ರೈತರ ಹೋರಾಟವು ಭೂಮಿ ಮತ್ತು ಕೃಷಿ ಹಕ್ಕುಗಳಿಗೆ ಸಂಬಂಧಿಸಿದ ಕಾನೂನು ಪರಿವರ್ತನೆಗಳಿಗೆ ಪ್ರೇರಣೆಯಾಯಿತು. ಚಳುವಳಿಯ ಪ್ರಮುಖ ನಾಯಕರುಗಳು ಕೆಂಗಲ್ ಹನುಮಂತಯ್ಯ – ರೈತರ ಹೋರಾಟದ ನಾಯಕ, ಭೂಮಿಯ ಹಕ್ಕು ಮತ್ತು ತೆರಿಗೆ ನ್ಯಾಯಕ್ಕಾಗಿ ಹೋರಾಡಿದರು. ಟಿ.ಆರ್. ಸೀತಾರಾಮಯ್ಯ – ರೈತರ ಧ್ವನಿಯಾಗಿ ಹಲವಾರು ಹಳ್ಳಿಗಳಲ್ಲಿ ಚಳುವಳಿಗೆ ಬಲ ನೀಡಿದರು. ಸೇನಾಪತಿ ಬಾಪಟ್ – ರೈತರ ಸಂಘಟನೆಗಳ ಮುಖಂಡ, ಬ್ರಿಟಿಷರ ನೀತಿಗಳಿಗೆ ವಿರೋಧವಾಗಿ ಚಳುವಳಿ ನಡೆಸಿದರು.

**ಕಾರ್ಮಿಕ ವರ್ಗದ ಪಾತ್ರ:**

ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಇತಿಹಾಸವನ್ನು ನಾವು ಸಾಮಾನ್ಯವಾಗಿ ರಾಜಕೀಯ ನಾಯಕರ, ರೈತರ ಅಥವಾ ವಿದ್ಯಾರ್ಥಿಗಳ ಹೋರಾಟದ ದೃಷ್ಟಿಯಿಂದ ಅಧ್ಯಯನ ಮಾಡುತ್ತೇವೆ. ಆದರೆ ಈ ಚಳುವಳಿಯ ನಿಜವಾದ ಆಧಾರವು ಕಾರ್ಮಿಕ ವರ್ಗದ ಶ್ರಮ ಮತ್ತು ತ್ಯಾಗದಲ್ಲಿಯೂ ಅಡಗಿದೆ.

ಕೈಗಾರೀಕರಣದ ಪ್ರಾರಂಭದಿಂದಲೇ ಕಾರ್ಮಿಕ ವರ್ಗವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಯ ಪ್ರಮುಖ ಶಕ್ತಿಯಾಗಿ ರೂಪುಗೊಂಡಿತು. ಈ ವರ್ಗವು ಕೇವಲ ಉದ್ಯೋಗಕ್ಕಾಗಿ ಹೋರಾಡದೆ, ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಸಹ ತಮ್ಮ ಪಾತ್ರ ನಿರ್ವಹಿಸಿತು. ಬ್ರಿಟಿಷ್ ಆಡಳಿತದ ಕಾಲದಲ್ಲಿ ಬೆಂಗಳೂರಿನ, ಹುಬ್ಬಳ್ಳಿಯ, ಬಳ್ಳಾರಿಯ, ಮಂಗಳೂರು ನಗರದ ಕಾರ್ಮಿಕರು ತೀವ್ರ ಶೋಷಣೆ ಮತ್ತು ದುರ್ಭರ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದರು. ಕಡಿಮೆ ವೇತನ, ಉದ್ದದ ಕೆಲಸದ ಸಮಯ, ಕೆಲಸದ ಸ್ಥಳದಲ್ಲಿ ಅಸುರಕ್ಷತೆ ಮತ್ತು ಹಕ್ಕಿನ ಕೊರತೆ – ಈ ಎಲ್ಲವು ಕಾರ್ಮಿಕರನ್ನು ಸ್ವಾತಂತ್ರ್ಯ ಚಳುವಳಿಯ ಭಾಗವಾಗಲು ಪ್ರೇರೇಪಿಸಿದವು. ಕಾರ್ಮಿಕ ವರ್ಗದ ಹೋರಾಟವು ಬ್ರಿಟಿಷರ ಆರ್ಥಿಕ ಅಸ್ತಿತ್ವವನ್ನು ನಡುಗಿಸಿತು. ಅವರ ಹೋರಾಟದಿಂದ "ಸ್ವತಂತ್ರ ಭಾರತದಲ್ಲಿ ಕಾರ್ಮಿಕ ಹಕ್ಕುಗಳ" ಕುರಿತ ಚಿಂತನೆ ಹುಟ್ಟಿತು. ಕಾರ್ಮಿಕ ವರ್ಗದ ಹೋರಾಟವು ಸ್ವಾತಂತ್ರ್ಯ ಚಳುವಳಿಗೆ ಆರ್ಥಿಕ ಬಲ ನೀಡಿತು.

ಭಾರತ ಬಿಟ್ಟು ತೊಲಗಿ ಚಳುವಳಿ 1942ರಲ್ಲಿ ನಡೆದ (ಕ್ವಿಟ್ ಇಂಡಿಯಾ ಚಳುವಳಿ) ಸಮಯದಲ್ಲಿ ಕೆ.ಜಿ.ಎಫ್, ದಾವಣಗೆರೆಯಲ್ಲಿ ಒಟ್ಟು 33,000 ಕಾರ್ಮಿಕರು 2 ವಾರಗಳ ಕಾಲ ಮುಷ್ಕರವನ್ನು ಹೂಡಿದರು. ಮೈಸೂರು ಚಲೋ ಚಳುವಳಿ (Mysore Chalo Movement)ಯಲ್ಲಿ ಬೆಂಗಳೂರು ಮತ್ತು ಮೈಸೂರು ಮಾರ್ಗವಾಗಿ ಚಲಿಸುತ್ತಿದ್ದ ರೈಲುಗಳನ್ನು ತಡೆದು ರೈಲ್ವೇ ಕಾರ್ಮಿಕರು ಮುಷ್ಕರ ಹೂಡಿ ಸಾರಿಗೆಸಂಪರ್ಕವನ್ನು ಅಸ್ತವ್ಯಸ್ತ ಮಾಡಲಾಯಿತು. ಬ್ರಿಟಿಷರ ಕಾಲದಲ್ಲಿ ಕರ್ನಾಟಕದಲ್ಲಿ ಕೈಗಾರಿಕಾ ವಿಸ್ತರಣೆ ನಡೆದರೂ, ಅದು

ಸ್ಥಳೀಯ ಜನರ ಹಿತದೃಷ್ಟಿಯಿಂದಲ್ಲ; ಬದಲಿಗೆ ಇಂಗ್ಲೆಂಡಿನ ಆರ್ಥಿಕ ಹಿತಾಸಕ್ತಿಗಾಗಿ. ಮೈಸೂರು ಸಿಲ್ಕ್ ಫ್ಯಾಕ್ಟರಿ, ಭದ್ರಾವತಿ ಸ್ಟೀಲ್ ವರ್ಕ್ಸ್, ಬೆಂಗಳೂರು ಕಾಟನ್ ಮಿಲ್‌ಗಳು, ರೈಲು ವರ್ಕ್‌ಶಾಪ್‌ಗಳು – ಇವುಗಳಲ್ಲಿ ಸ್ಥಳೀಯ ಕಾರ್ಮಿಕರನ್ನು ಕಡಿಮೆ ವೇತನಕ್ಕೆ ಶೋಷಿಸಲಾಯಿತು. ಈ ಶೋಷಣೆಯೇ ಕಾರ್ಮಿಕರಲ್ಲಿ ಸಂಘಟನೆಯ ಬಯಕೆಯನ್ನು ಹುಟ್ಟಿಸಿತು.

1920ರ ದಶಕದಿಂದ ಕಾರ್ಮಿಕ ವರ್ಗವು ಸಾಮಾಜಿಕ ಜಾಗೃತಿ ಪಡೆದು, ಹೋರಾಟದ ನೈತಿಕ ಬಲವಾಗಿ ಪರಿಣಮಿಸಿತು. 1923ರಲ್ಲಿ ಮೈಸೂರು ಲೇಬರ್ ಅಸೋಸಿಯೇಶನ್ ಸ್ಥಾಪನೆಯು ಕರ್ನಾಟಕದ ಕಾರ್ಮಿಕ ಚಳುವಳಿಯ ಮೊದಲ ಸಂಘಟಿತ ಹಂತವಾಗಿತ್ತು. ಈ ಸಂಘಟನೆಗಳು ವೇತನ, ಕೆಲಸದ ಸಮಯ, ಹಾಗೂ ಕಾರ್ಮಿಕ ಹಕ್ಕುಗಳ ಕುರಿತ ಬೇಡಿಕೆಗಳ ಜೊತೆಗೆ ರಾಜಕೀಯ ಚೇತನವನ್ನೂ ಹರಡಿದವು. ಧಾರವಾಡ, ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರು ಪ್ರದೇಶಗಳಲ್ಲಿ ಕಾರ್ಮಿಕರು ಸತ್ಯಾಗ್ರಹ, ಮುಷ್ಕರ ಮತ್ತು ಸಭೆಗಳ ಮೂಲಕ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಗಾಂಧೀಜಿಯವರ ಅಸಹಕಾರ ಚಳುವಳಿ ಮತ್ತು ಸಾಮಾಜಿಕವಾದ ಚಿಂತನೆಗಳ ಸಂಯೋಜನೆಯಿಂದ ಈ ಸಂಘಟನೆಗಳು ರಾಷ್ಟ್ರಭಕ್ತಿಯ ವೇದಿಕೆಯಾದವು. ಕಾನೂನು ಭಂಗ ಚಳುವಳಿ (1930–34) ರಲ್ಲಿ ಕಾರ್ಮಿಕರು ಗಾಂಧೀಜಿಯವರ ಕರೆಗೆ ಸ್ಪಂದಿಸಿ ವಿದೇಶಿ ವಸ್ತುಗಳ ಬಹಿಷ್ಕಾರ ಮತ್ತು ಖಾದಿ ಬಳಕೆ ಪ್ರಚಾರದಲ್ಲಿ ಪಾಲ್ಗೊಂಡರು. ಹಲವು ಕಾರ್ಮಿಕರು ಬಂಧಿತರಾದರೂ ತಮ್ಮ ಹೋರಾಟವನ್ನು ಮುಂದುವರಿಸಿದರು.

ಮೈಸೂರು ಚಳುವಳಿ (1938–47) ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವದ ಕೊರತೆ ವಿರುದ್ಧ ನಡೆದ "ಮೈಸೂರು ಚಲೋ" ಚಳುವಳಿಯಲ್ಲಿ ಕಾರ್ಮಿಕರು ಪ್ರಮುಖ ಪಾತ್ರ ವಹಿಸಿದರು. ಕೈಗಾರಿಕಾ ಕಾರ್ಮಿಕರು ಪ್ರತಿಭಟನೆಗಳ ಮೂಲಕ ಜನಪ್ರತಿನಿಧಿ ಸರ್ಕಾರಕ್ಕಾಗಿ ಹೋರಾಡಿದರು. ಕ್ವಿಟ್ ಇಂಡಿಯಾ ಚಳುವಳಿ (1942) ಕಾರ್ಮಿಕ ವರ್ಗವು ಈ ಚಳುವಳಿಯಲ್ಲಿ ಮುಷ್ಕರ, ಮೆರವಣಿಗೆ, ಘೋಷಣೆಗಳ ಮೂಲಕ ತಮ್ಮ ರಾಷ್ಟ್ರಭಕ್ತಿಯನ್ನು ತೋರಿಸಿತು. ಭದ್ರಾವತಿ ಐರನ್ ಅಂಡ್ ಸ್ಟೀಲ್ ಕಾರ್ಖಾನೆ, ಮೈಸೂರು ಸಿಲ್ಕ್ ಫ್ಯಾಕ್ಟರಿ, ಬೆಂಗಳೂರು ರೈಲು ವರ್ಕ್‌ಶಾಪ್‌ಗಳುಗಳಲ್ಲಿ ಕೆಲಸ ನಿಲ್ಲಿಸಿ ಪ್ರತಿಭಟನೆ ನಡೆಸಿದರು. ವಿಮರ್ಶಾತ್ಮಕ ನೋಟ: ಕಾರ್ಮಿಕ ವರ್ಗದ ಈ ಹೋರಾಟವು ಕೇವಲ ಸ್ವಾತಂತ್ರ್ಯದ ಬಯಕೆಯಲ್ಲ, ಅದು ಮಾನವ ಗೌರವದ ಹೋರಾಟವೂ ಆಗಿತ್ತು. ಬ್ರಿಟಿಷರ ಶೋಷಣೆ ವಿರುದ್ಧವಾದ ಅವರ ಬಂಡೆ ಸಾಮಾಜಿಕ ನ್ಯಾಯದ ನಾದವಾಯಿತು. ಸಾಮಾಜಿಕವಾದ ಮತ್ತು ಕಮ್ಯುನಿಸ್ಟ್ ಚಿಂತನೆಗಳ ಪ್ರಭಾವದಿಂದಾಗಿ 1930ರ ನಂತರ ಕಾರ್ಮಿಕ ಚಳುವಳಿಯು ಸಾಮ್ಯವಾದ, ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಧೋರಣೆಯನ್ನು ಅಳವಡಿಸಿಕೊಂಡಿತು. ಎಚ್.ವಿ. ಕಮತ್, ಎನ್. ನಾಗಪ್ಪ, ಮೈಸೂರು ರಾಮಸ್ವಾಮಿ ಮುಂತಾದವರು ಕಾರ್ಮಿಕ ಹೋರಾಟವನ್ನು ರಾಷ್ಟ್ರವಾದಿ ರಾಜಕೀಯದೊಂದಿಗೆ ಜೋಡಿಸಿದರು. ಈ ಚಿಂತನೆಗಳು ಸ್ವಾತಂತ್ರ್ಯ ಚಳುವಳಿಯೊಳಗೆ ಸಮಾಜ ಪರಿವರ್ತನೆಯ ಬಿಂಬವನ್ನು ತಂದುಕೊಟ್ಟವು. ವಿಮರ್ಶಾತ್ಮಕ ಅಭಿಪ್ರಾಯ: ಸ್ವಾತಂತ್ರ್ಯ ಚಳುವಳಿಯೊಳಗೆ ಎಡಪಂಥೀಯ ಚಿಂತನೆಗಳ ಸೇರ್ಪಡೆ ಕಾರ್ಮಿಕ ವರ್ಗಕ್ಕೆ ಹೊಸ ಬಲ ನೀಡಿತು. ಆದರೆ ಕೆಲವು ಪ್ರದೇಶಗಳಲ್ಲಿ ಇದು ಸಂಘಟನೆಯ ವಿಭಜನೆಗೂ ಕಾರಣವಾಯಿತು.

**ಕಾರ್ಮಿಕ ಸಂಘಟನೆಗಳ ಸ್ಥಾಪನೆ ಮತ್ತು ಮುಷ್ಕರಗಳು**

ಬೆಂಗಳೂರು ವಸ್ತ್ರ ಕಾರ್ಮಿಕರ ಸಂಘ, ಮೈಸೂರು ಸಿಲ್ಕ್ ಫ್ಯಾಕ್ಟರಿ, ರೈಲು ಕಾರ್ಮಿಕರು, 1920–1940 ವೇತನ ಹೆಚ್ಚಳ, ಕೆಲಸದ ಸಮಯ ಕಡಿತ ಮತ್ತು ಕಾರ್ಮಿಕ ಹಕ್ಕುಗಳಿಗಾಗಿ ಹೋರಾಟ. 2. ಬ್ಯಾಂಕ್, ಕಾರ್ಖಾನೆ, ಬಂದರು ಕಾರ್ಮಿಕ ಚಳುವಳಿ, ಹುಬ್ಬಳ್ಳಿ, ಬೆಳ್ಳಾರಿ, ಮಂಗಳೂರು 1930–1940, ಉದ್ಯೋಗ ಭದ್ರತೆ ಮತ್ತು ದುರ್ಭರ ಆಡಳಿತಕ್ಕೆ ವಿರೋಧವಾಗಿ ಪ್ರತಿಭಟನೆ. 3. ಮೈಸೂರು ಲೇಬರ್ ಅಸೋಸಿಯೇಶನ್, ಬೆಳಗಾವಿ ಕಾರ್ಮಿಕ ಸಂಘ, ಧಾರವಾಡ ಕಾರ್ಮಿಕ ಯೂನಿಯನ್, ಬೆಳಗಾವಿ ಧಾರವಾಡ1930 ಕಾರ್ಮಿಕರು ವೇತನ, ಕೆಲಸದ ಸಮಯ, ಹಕ್ಕುಗಳು ಮತ್ತು ಮಾನವೀಯ ಪರಿಸ್ಥಿತಿಗಳಿಗಾಗಿ ಹೋರಾಡಿದರು. ಸ್ವಾತಂತ್ರ್ಯ ಚಳುವಳಿಯೊಂದಿಗೆ ಕಾರ್ಮಿಕ ಒಕ್ಕೂಟಗಳು, ರಾಜ್ಯದ ಹಲವು ಕೈಗಾರಿಕಾ ಪ್ರದೇಶಗಳು, 1920–1942, ಬ್ರಿಟಿಷ್ ಆಡಳಿತ ವಿರೋಧಿ ಪ್ರತಿಭಟನೆಗಳಲ್ಲಿ ಪಾಲ್ಗೊಂಡು ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡಿದರು. ಇವುಗಳು ಕಮ್ಯುನಿಸ್ಟ್ ಮತ್ತು ಸಾಮಾಜಿಕ ಚಿಂತನೆಗಳಿಂದ ಪ್ರೇರಿತವಾಗಿದ್ದವು.

**ಉಪಸಂಹಾರ:**

ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಇತಿಹಾಸವನ್ನು ಅವಲೋಕಿಸಿದರೆ, ಅದರಲ್ಲಿ ರೈತರು, ಸಾಮಾನ್ಯ ಜನರು ಹಾಗೂ ಕಾರ್ಮಿಕ ವರ್ಗದ ಪಾತ್ರ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದೆ. ಪ್ರಾರಂಭದ ಹಂತಗಳಲ್ಲಿ ಸ್ವಾತಂತ್ರ್ಯ ಚಳುವಳಿ ಮುಖ್ಯವಾಗಿ ಶಿಕ್ಷಣ ಪಡೆದ ಮೇಲ್ವರ್ಗದವರ ನೇತೃತ್ವದಲ್ಲಿ ನಡೆದರೂ, ಸಮಯದ ಪ್ರಯಾಣದಲ್ಲಿ ರೈತರ, ಕಾರ್ಮಿಕರ ಮತ್ತು ಸಾಮಾನ್ಯ ಜನರ ಪಾಲ್ಗೊಳ್ಳುವಿಕೆ ಚಳುವಳಿಯನ್ನು ನಿಜವಾದ ಜನಚಳುವಳಿಯಾಗಿ ರೂಪಿಸಿತು. ಗ್ರಾಮೀಣ ರೈತರು ಭೂಸಂಸ್ಥೆಗಳ ಅನ್ಯಾಯ, ತೆರಿಗೆ ಶೋಷಣೆ ಮತ್ತು ಆರ್ಥಿಕ ಕಷ್ಟಗಳ ವಿರುದ್ಧ ಹೋರಾಡಿ ಬ್ರಿಟಿಷರ ಆಡಳಿತದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಅವರ ಹೋರಾಟಗಳು 1920ರ ದಶಕದ ನಂತರದ ಅಸಹಕಾರ ಚಳುವಳಿ, ಉಪ್ಪು ಸತ್ಯಾಗ್ರಹ ಮತ್ತು ಕ್ವಿಟ್ ಇಂಡಿಯಾ ಚಳುವಳಿಗೆ ಜನಾಧಾರ ಒದಗಿಸಿತು. ಕಾರ್ಮಿಕ ವರ್ಗವು ಗಣಿಗಾರಿಕೆ, ಕೈಗಾರಿಕೆ ಮತ್ತು ಸಾರಿಗೆ ಕ್ಷೇತ್ರಗಳಲ್ಲಿ ಸಂಘಟಿತ ಪ್ರತಿಭಟನೆಗಳ ಮೂಲಕ ಬ್ರಿಟಿಷರ ಆರ್ಥಿಕ ನೆಲೆಯನ್ನು ಕದಡಿತು. ಸಾಮಾನ್ಯ ಜನರು ಗ್ರಾಮ ಮಟ್ಟದ ಸಭೆಗಳು, ಸ್ವದೇಶಿ ಚಳುವಳಿ, ಖಾದಿ ಚಟುವಟಿಕೆಗಳು ಮತ್ತು ರಾಷ್ಟ್ರೀಯ ಶಾಲೆಗಳ ಸ್ಥಾಪನೆ ಮೂಲಕ ದೇಶಭಕ್ತಿಯ ಭಾವನೆ ಬಲಪಡಿಸಿದರು. ಅವರ ಸಕ್ರಿಯ ಭಾಗವಹಿಸುವಿಕೆ ಚಳುವಳಿಗೆ ಹೊಸ ಉತ್ಸಾಹ ನೀಡಿತು ಹಾಗೂ ಸಾಮಾಜಿಕ ಜಾಗೃತಿ ಮೂಡಿಸಿತು. ಈ ವರ್ಗಗಳ ಒಗ್ಗಟ್ಟು, ತ್ಯಾಗ ಮತ್ತು ಶ್ರಮದಿಂದ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ ಕೇವಲ ರಾಜಕೀಯ ಹೋರಾಟವಲ್ಲ, ಸಾಮಾಜಿಕ ಬದಲಾವಣೆಯ ಚಳುವಳಿಯೂ ಆಗಿ ಬೆಳೆಯಿತು. ಅಂತಿಮವಾಗಿ, ರೈತರು, ಕಾರ್ಮಿಕರು ಮತ್ತು ಸಾಮಾನ್ಯ ಜನರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಸ್ವಾತಂತ್ರ್ಯ ಚಳುವಳಿ ಜನಪರ ಚಳುವಳಿಯಾಗಿ ಬೆಳೆದಿತು. ಅವರ ತ್ಯಾಗ, ಧೈರ್ಯ ಮತ್ತು ದೃಢಸಂಕಲ್ಪವೇ ಭಾರತದ ಸ್ವಾತಂತ್ರ್ಯದ ಹಾದಿಯನ್ನು ಬಲಪಡಿಸಿದವು. ಹೀಗಾಗಿ, ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಶಕ್ತಿ ಮೇಲ್ವರ್ಗದ ನಾಯಕತ್ವದಲ್ಲಷ್ಟೇ ಅಲ್ಲ, ಜನಸಾಮಾನ್ಯರ ಅಂತರಾಳದಲ್ಲಿಯೂ ಆಳವಾಗಿ ನೆಲೆಯೂರಿತ್ತು ಎಂಬುದು ಈ ವಿಮರ್ಶೆಯಿಂದ ಸ್ಪಷ್ಟವಾಗಿ ಕಾಣುತ್ತದೆ.

## ಪರಾಮರ್ಶನ ಗ್ರಂಥಗಳು:


1. ಕೆ ಅಶ್ವತ್ಥಪ್ಪ(2024)ಕರ್ನಾಟಕದಲ್ಲಿ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿ, ಪ್ರಕಾಶನ: ಸಪ್ನ ಬುಕ್ ಹೌಸ್, ಬೆಂಗಳೂರು560009, ISBN:9789354568466
2. ನಾಗರಾಜು 2006ಕರ್ನಾಟಕ ರೈತ ಚಳುವಳಿ ಸತ್ಯಾಗ್ರಹ ಪ್ರಕಾಶನ: ಸರ್ಕಾರಿ ಮುದ್ರಣಾಲಯ, ಬೆಂಗಳೂರು 560001
3. ಎಸ್, ಚಂದ್ರಶೇಖರ್. (2001),ಆಧುನಿಕ ಕರ್ನಾಟಕದ ಆಂದೋಲನಗಳು ನಮ್ಮ ಪ್ರಕಾಶನ, ಬಿಳಿಗೆರೆ, ತಿಪಟೂರು ತಾಲ್ಲೂಕು ತುಮಕೂರು ಜಿಲ್ಲೆ.
4. ಕೆ.ಸದಾಶಿವ, (2019) ಭಾರತದ ಸ್ವಾತಂತ್ರ್ಯ ಹೋರಾಟ(18571961)ಪ್ರಕಾಶನ: ಪ್ರಿಯದರ್ಶಿನಿ ಪ್ರಕಾಶನ, ಮೈಸೂರು570026.
5. ಸೂರ್ಯನಾಥ ಕಮತ್ –2021, ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ.
6. ಕೆ ಅಶ್ವತ್ಥಪ್ಪ(2021)ಕರ್ನಾಟಕದಲ್ಲಿ ಸ್ವಾತಂತ್ರ್ಯ ಮತ್ತು ಏಕೀಕರಣ ಚಳುವಳಿ, ಪ್ರಕಾಶನ: ಸಪ್ನ ಬುಕ್ ಹೌಸ್, ಬೆಂಗಳೂರು560009, ISBN: 9789387308121
7. ಕರ್ನಾಟಕ ಪಠ್ಯಪುಸ್ತಕ ಮಂಡಳಿ – PUC / Degree History Textbooks.
8. ಟಿ.ಜಿ ಚಂದ್ರಶೇಖರಪ್ಪ (2015), ಆಧುನಿಕ ಭಾರತದ ಇತಿಹಾಸ (ಆರಂಭದಿಂದ 2004) ಪ್ರಕಾಶನ:ಪೂರ್ಣ ಪ್ರಕಾಶನ, ಶಿವಮೊಗ್ಗ577203
9. Mag Book Indian History, Coverage of Important facts from NCERT Books (Class 612), Published by: Arihant Publications (India) Ltd.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.